ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಶ್ರೀಮಾನ್ ಶ್ರೀನಿವಾಸರೆಡ್ಡಿಯವರ ಹೆಸರನ್ನು ನಮ್ಮ ಪಾರ್ಟಿ ಪರವಾಗಿ ನಾವೇ ಕೊಟ್ಟಿದ್ದೇವೆ. ಅದನ್ನು ತಾವು ಅನೌನ್ಸ್ ಮಾಡಿದ್ದೀರೆಂದು ನಾವು ತಿಳಿದುಕೊಂಡಿದ್ದೇವೆ.

Mr. SPEAKER.—The Hon. Member is speaking something that he said to somebody somewhere. All that will not help. The proceedings of the 24th must have been read by the Members, or so we take it. If he had not read it, it is his fault. Why did not Sri J. Srinivasa Reddy raise the issue at the appropriate time? He did not object even when the Report of the Select Committee was presented. Both he and Sri Lakshmipathi were not perhaps attentive when the Debate was going on and when the Bill was discussed. But when the clauses were put, he raised this objection. What is all this? Members must be more alert and help the chair better.

2-00 P.M.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ಈ ಮಾನ್ಯ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಹಾಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈ ಅಧಿವೇಶನವನ್ನು ಕರೆವಾಗ ನಾವು ಈ ಅಧಿವೇಶನದಲ್ಲಿ ಗ್ರಾಮಪರಿಚಾಯಿತಿ ಮತ್ತು ತಾಲ್ಲೂಕುಬೋರ್ಡುಗಳಿಗೆ ಸಂಬಂಧಪಟ್ಟ ಪಂಚಾಯಿತಿ ರಾಜ್ಯ ವಿಧೇಯಕ ಚರ್ಚೆಗೆ ಬರಬಹುದೆಂದು ತಿಳಿದುಕೊಂಡಿದ್ದೆವು. ಈ ಪಂಚಾಯಿತಿ ರಾಜ್ಯ ವಿಧೇಯಕವನ್ನು ಜಂಟೀ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ಅವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ನಮಗೆ ತಿಳಿದು ಬಂದಿದೆ.

Mr. SPEAKER.—If Sri S. M. Krishna is raising any point afresh, he may please be specific. I cannot allow door to be opened for a Debate in this matter.

Mysore Irrigation Bill, 1965 as Reported by the Joint Select Committee

—(Debate Continued.)

Now we will take up the consideration of the Report of the Joint Select Committee on the Irrigation Bill. Sri H. R. Keshavamurthy will speak. The Hon'ble Member will please remember that he has given notice of an amendment seeking for deletion of a clause. It would be proper if he were to oppose it instead of asking for deletion. So, in support of his amendment if he wants to say anything he must speak now alone.

Sri H. R. KESHAVA MURTHY (Gandasi).—Sir, it is only substitution of a clause to another clause.

Mr. SPEAKER.—Whatever it is, I want to help the Hon'ble Member. He may make use of it as he likes.

†ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಸಭಾಪತಿಗಳೆ, ಈಗ ಈ ಸಭೆಯ ಮುಂದೆ ತಂದಿರತಕ್ಕಂಥ ಇರಿಗೇಷನ್ ಬಿಲ್ ಏನಿದೆ ಇದು, ಸಾಮಾನ್ಯವಾಗಿ ಹಿಂದೆ ಯಾವ ಬಿಲ್ಲು ಇತ್ತೋ ಅದೇ ಬಿಲ್ಲನ್ನು ಸ್ವಲ್ಪ ಮಾತ್ರ ಮಾರ್ಪಾಡು ಮಾಡಿ ಈಗ ಈ ಸಭೆಯ ಮುಂದೆ ತಂದಿದ್ದಾರೆ. ಇದರಲ್ಲಿ ಸಾಮಾನ್ಯವಾಗಿ ಮೇಜರ್, ಮೀಡಿಯಂ, ಮತ್ತು ಮೈನರ್ ಇರಿಗೇಷನ್ ಎಂದು ಮೂರು ವಿಭಾಗವಾಗಿ ಮಾಡಿ ಬಹಳ ಹೆಚ್ಚು ಪ್ರಾಮುಖ್ಯವಾಗಿ ಧೇಶಾದ್ಯಂತ ಅನುಕೂಲವಾಗುವಂತಹ ಒಂದು

(ಶ್ರೀ ಎಚ್. ಆರ್. ಕೇಶವಮೂರ್ತಿ)

ಸಮರ್ಪಕವಾದ ಬಿಲ್ಲು ಇದು ಇರಬೇಕಾಗಿತ್ತು. ಆದರೆ ಈಗ ಇದರಲ್ಲಿ ಕೇವಲ ಫೀಡರ್‌ಚಾನಲ್, ಟ್ಯಾಂಕ್ಸ್ ಕ್ಯನಾಲ್, ಇವುಗಳ ವಿಷಯದಲ್ಲಿ ಮಾತ್ರ ಹೇಳಿದ್ದಾರೆ. ನಮ್ಮ ದೇಶದಲ್ಲಿ ಬೃಹದಾಕಾರವಾದ ಇರಿಗೇಷನ್ ಕೆಲಸಗಳಿವೆ. ನಮ್ಮ ದೇಶದಲ್ಲಿ ಇರಿಗೇಷನ್ ಕೆಲಸಗಳಿಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳೂ ಕೂಡ ಇದರಲ್ಲಿ ಅಡಕವಾಗಿರಬೇಕಾಗಿತ್ತು. ಈಗ ನಮ್ಮ ದೇಶದಲ್ಲಿ ಆಹಾರ ಅಭಾವ ಇರುವಾಗ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ನೀರು ಬಹಳ ಮುಖ್ಯವಾದದ್ದು, ಅಷ್ಯೂರ್ಡ್ ಸಪ್ಲೈ ಆಫ್ ವಾಟರ್ ನಮಗೆ ಬೇಕು. ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕು. ಇರಿಗೇಷನ್ ಪೊಟೆನ್ಸಿಯಾಲಿಟಿ ನಮ್ಮ ದೇಶದಲ್ಲಿ ಎಷ್ಟು ಇದೆ, ಯಾವ ಯಾವ ರೀತಿಯಲ್ಲಿರತಕ್ಕಂಥ ಸೋರ್ಸಸ್ ಅನ್ನು ಎಕ್ಸ್‌ಪ್ಲಾಯ್ಟ್ ಮಾಡಿಕೊಳ್ಳಬೇಕು, ನದಿಗಳನ್ನು ಯಾವ ರೀತಿ ಹಾರ್ನೆಸ್ ಮಾಡಿಕೊಳ್ಳಬೇಕು, ಎಂಬುದಕ್ಕೆ ಯಾವ ಯಾವ ಯೋಜನೆಗಳನ್ನು ಮಾಡಿಕೊಳ್ಳಬೇಕೊ ಅದನ್ನು ಮಾಡಿಕೊಂಡು ಆ ಯೋಜನೆಗಳಿಗೆ ಎಷ್ಟು ಹಣ ಬೇಕೋ ಆ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಒಂದು ಸಂಸ್ಥೆ ಇರಬೇಕು. ನಮ್ಮ ದೇಶದ ಒಬ್ಬರು ಚೀಫ್ ಇಂಜಿನಿಯರು ಹೇಳಿದ್ದಾರೆ, ನಮ್ಮ ದೇಶದಲ್ಲಿ ಎಲ್ಲಾ ಮೈನರ್ ಇರಿಗೇಷನ್‌ಗಳನ್ನೂ ತೆಗೆದುಕೊಳ್ಳಬೇಕಾದರೆ 700 ಕೋಟಿ ರೂಪಾಯಿಗಳು ಬೇಕೆಂದು. ಈ ರೀತಿ 700 ಕೋಟಿ ರೂಪಾಯಿಗಳ ಫೀಡರ್‌ಚಾನಲ್, ಕ್ಯನಾಲ್, ಟ್ಯಾಂಕ್ಸ್, ವೆಲ್ಸ್ ಇತ್ಯಾದಿಗಳ ಕೆಲಸಗಳನ್ನು ತೆಗೆದುಕೊಳ್ಳುವಂತೆ ಈ ಮಸೂದೆಯಲ್ಲಿ ಅಳವಡಿಸಿಕೊಂಡು ಅವುಗಳಿಗೆ ಒಂದು ಯೋಜನೆಯನ್ನು ತಯಾರುಮಾಡಿಕೊಂಡು ಆ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಎಷ್ಟು ದುಡ್ಡು ಬೇಕೋ ಅಷ್ಟು ದುಡ್ಡನ್ನು ಕೂಡಿಸಲು ಒಂದು ಮಾರ್ಗವನ್ನು ಹುಡುಕಬೇಕು. ಮತ್ತು ನಮ್ಮ ದೇಶದಲ್ಲಿ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಅಮೂರ್ತಾಗ್ರವಾಗಿ ಪರಿಶೀಲಿಸುವುದಕ್ಕೆ ಒಂದು ಸಂಸ್ಥೆ ಇರಬೇಕು. ಆ ಸಂಸ್ಥೆಯವರು ಇರಿಗೇಷನ್ ಪೊಟೆನಿಸಿಯಾಲಿಟಿ ಎಷ್ಟು ಇದೆ ಎಂಬುದನ್ನು ಕಂಡುಹಿಡಿದು, ಅದನ್ನೆಲ್ಲಾ ಉಪಯೋಗ ಮಾಡಿಕೊಳ್ಳಲು ಎಷ್ಟು ದುಡ್ಡು ಬೇಕು, ಎಂಬುದನ್ನು ಎಸ್ಟಿಮೇಟ್ ಮಾಡಿ ಆ ದುಡ್ಡನ್ನು ಹೇಗೆ ತರಬೇಕು, ಎನ್ನುವಂತಹ ಒಂದು ಮಾರ್ಗವನ್ನು ಹುಡುಕಬೇಕು. ಮತ್ತು ಆ ಯೋಜನೆಗಳನ್ನು ತೆಗೆದುಕೊಳ್ಳಲು ಈ ಮಸೂದೆಯಲ್ಲಿ ಅವಕಾಶವನ್ನು ಕಲ್ಪಿಸಬೇಕು. ಈಗ ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್ಸ್ ಬಿಲ್ಲನ್ನು ಮಾಡಿದ್ದಾರೆ, ಅದಕ್ಕೆ ಬೇಕಾದಂತ ದುಡ್ಡನ್ನು ಒದಗಿಸಿಕೊಳ್ಳಲು ಯಾವ ತರಹ ಮಾಡಿದ್ದಾರೆ ಎಂಬುದನ್ನು ಸಮಗ್ರವಾಗಿ ವಿವರಿಸಿದ್ದಾರೆ. ಈ ರೀತಿಯಾದಂತಹ ಒಂದು ಪ್ರಾವಿಜನ್ ಕೊಡತಕ್ಕಂಥ ಒಂದು ಬಿಲ್ಲನ್ನು ಮಾಡಬೇಕಾಗಿತ್ತು. ಈ ಬಿಲ್ಲಿನಲ್ಲಿ ಸಮಗ್ರವಾದ ಯೋಜನೆ ಇಲ್ಲ. ನಮ್ಮ ದೇಶ ಮೈನರ್ ಇರಿಗೇಷನ್‌ನಲ್ಲಿ ಬಹಳ ಹಿಂದುಳಿದಿದೆ. ಮೈನರ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಫಾರಿನ್ ಎಕ್ಸ್‌ಚೇಂಜ್ ಬೇಕಾಗಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಊರಿಗೂ ಒಂದೊಂದು ಕೆರೆ ಇದೆ. ಮತ್ತು ಕೆಲವು ಊರುಗಳಲ್ಲಿ ಕಟ್ಟೆಗಳೂ ಇವೆ. ಈ ಪ್ರತಿವರ್ಷವೂ ಕೆರೆಕಟ್ಟೆಗಳ ಹೂಳನ್ನು ತೆಗೆಸಿ ಅವುಗಳನ್ನು ರಿಪೇರಿ ಮಾಡಿಸಬೇಕು. ಅನೇಕ ಊರುಗಳಲ್ಲಿರತಕ್ಕ ಕೆರೆಗಳು ಒಡೆದು ಹೊಗಿವೆ. ಅವುಳನ್ನು ಕೇಳುವವರೇ ಇಲ್ಲ. ಸರ್ಕಾರಿ ಬಿಲ್ಡಿಂಗ್‌ಗಳನ್ನು ಹೇಗೆ ಸರ್ಕಾರದವರು ರಿಪೇರಿ ಮಾಡಿಸುತ್ತಾರೆಯೋ ಅದೇ ರೀತಿ ಈ ಕೆರೆಕಟ್ಟೆಗಳನ್ನೂ ರಿಪೇರಿ ಮಾಡಿಸಬೇಕು. ಬಿಲ್ಡಿಂಗಳಿಗೆ ಯಾವ ರೀತಿ ಅನ್ಯುಯಲ್ ರಿಪೇರಿಗೊನ್ಕರ ಇಷ್ಟು ಅಮೌಂಟ್ ಇರಬೇಕೆಂದು ಒದಗಿಸುತ್ತೀರೊ ಅದೇರೀತಿ ಸರ್ಕಾರದವರು ಈ ಕೆರೆಕಟ್ಟೆಗಳ ರಿಪೇರಿಗೂ ಹಣವನ್ನು ಒದಗಿಸಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಈ ಬಿಲ್ಲಿನಲ್ಲಿ ಹೇಳಿರುವಂತೆ ಮೆಂಟೆನೆನ್ಸ್ ಸೆಸ್ಸನ್ನು ಒಂದು ಎಕರೆಗೆ 4 ರೂಪಾಯಿಗಳಂತೆ ಹಾಕಿದ್ದಾರೆ. ಇದರಿಂದ ಈ ಕೆಲಸವನ್ನು ಸರ್ಕಾರದವರು ನಿರ್ವಹಿಸುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ನೋಡಬೇಕಾಗಿದೆ. ಒಂದು ವೇಳೆ ಈ ಹಣದಿಂದ ಸರ್ಕಾರದವರು ಈ ಕೆಲಸವನ್ನ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಬೇರೆ ಯಾವರೀತಿಯಿಂದಲಾದರೂ ಇದಕ್ಕೆ ಹಣವನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಕೆರೆ ಕಟ್ಟೆಗಳು, ಬಂಡಾರಗಳು ಇವುಗಳ ಕನ್‌ಸ್ಟ್ರಕ್ಷನ್, ರಿಪೇರಿ ಇತ್ಯಾದಿಗಳಿಗೆ ಸಂಬಂಧಪಟ್ಟಹಾಗೆ ಒಂದು ಯೋಜನೆಯನ್ನು ಮಾಡಿ ಅದನ್ನು ಈ ಇರಿಗೇಷನ್ ಬಿಲ್ಲಿನಲ್ಲಿ ಅಳವಡಿಸಬೇಕಾಗಿತ್ತು. ಆದರೆ ಸರ್ಕಾರದವರು ಆರೀತಿ ಮಾಡಿಲ್ಲ. ಅದು ಒಂದು ದೊಡ್ಡ ಲೋಪ. ಇದು ಒಂದು ಕಾಂಪ್ರಹೆನ್ಸೀವ್ ಬಿಲ್ ಅಲ್ಲ. ಈ ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ ಒಂದು ಯೋಜನೆಯನ್ನು ಮಾಡಿ ಅದರಲ್ಲಿ ಹೊಸದಾಗಿ ಕಟ್ಟತಕ್ಕಂಥ ಕೆರೆಕಟ್ಟೆಗಳು, ಬಾವಿಗಳು, ಬಂಡಾರಗಳು ಇತ್ಯಾದಿಗಳನ್ನೆಲ್ಲಾ ಅದರಲ್ಲಿ ಸೇರಿಸಿ ಅವುಗಳನ್ನು ಯಾವ ರೀತಿ ಮೇಂಟೇನ್ ಮಾಡಬೇಕು ಎಂಬುದನ್ನೂ ಸಹ ಅಳವಡಿಸಿ ಈ ಬಿಲ್ಲನ್ನೂ ಈ ಸಭೆಯ ಮುಂದೆ

ತಂದಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ. ಕೆಲವು ಕ್ಲಾಸುಗಳಲ್ಲಿ ಕೆಲವು ಬದಲಾವಣೆ ಗಳಾಗಬೇಕಾಗಿದೆ, ಅವನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಅಮೆಂಡುಮೆಟುಗಳಲ್ಲಿ ಕೂಡ ಹೇಳಿದ್ದೇನೆ. ಆದರೆ ಒಂದೆರಡರ ಬಗ್ಗೆ ಮಾತ್ರ ಹೇಳುತ್ತೇನೆ.

ಕ್ಲಾಸು 16(2)(ಎ)ನಲ್ಲಿ ಹೀಗೆ ಹೇಳುತ್ತಾರೆ:

(2) Not withstanding anything contained in the Land Acquisition Act, 1894.....compensation to be awarded shall be—

(*a*) in the case of land which is assessed as wet, one hundred times, and

(*b*) in the case of land which is assessed as dry, two hundred times, the land revenue payable. ಕೆಳಗೆ ಎಕ್ಸ್‌ಪ್ಲನೇಶನ್ನಿನಲ್ಲಿ,

"land revenue" shall included water rate, where such rate is payable annually..... ...

ಎಂದು ಹೇಳಿದ್ದಾರೆ. ಕಲ್ಪವೇಶನ್ನಿನಲ್ಲಿದ್ದರೆ, ಅಂಥ ಸನ್ನಿವೇಶದಲ್ಲಿ ಎಷ್ಟು ಕೊಡಬೇಕು. ಆದ್ದರಿಂದ ಈ ಕ್ಲಾಸು ಸಂಪೂರ್ಣವಾಗಿಲ್ಲ. ಡ್ರೈ ಲ್ಯಾಂಡುಗಳಿಗೆ ಕೆಲವು ಕಡೆ ಟೆಂಪೊರರಿವಾಟರ್ ರೇಟು ಇರುತ್ತದೆ; ಕೆಲವು ಕಡೆ ಅದು ಯ್ಯೂತಿಯಲ್ ರೇಟಿಗಿಂತ ಡಬ್ಬಲ್ ಇರುತ್ತದೆ. ಇದನ್ನು ನಿಗದಿ ಮಾಡಿಲ್ಲ. ಇಲ್ಲಿ ಆ ಲೋಪವಿದೆ. ಈಗಿರುವಂತೆ ಇವ್ವರೆ, ಅದು ಸರಿಹೋಗುವುದಿಲ್ಲ.

28ನೆ ಕ್ಲಾಸಿನಲ್ಲಿ, ಸಬ್ ಕ್ಲಾಸು (2)ರಲ್ಲಿ—

If after a perid of six successive years supply of water is made to any land, the holder of such land applies for the supply of water being made permanent, ಅಂತ ಇದ್ದರೆ, ಸಪ್ಲೈ ಆಫ್ ವಾಟರ್ ಪರ್ಮನೆಂಟ್ ಮಾಡುವುದನ್ನು ಅನಾವಶ್ಯಕವಾಗಿ ಮುಂದಕ್ಕೆ ಹಾಕಿದ ಹಾಗಾಗುತ್ತದೆ. ಇದನ್ನು ಮಾಡಿರುವುದು ರೈತನಿಗೆ ಏರ್ಪಾ ವಿಧದಲ್ಲಿಯೂ ಸಹಾನುಭೂತಿ ತೋರಿಸುವುದಕ್ಕೆ. ಆದ್ದರಿಂದ ಇದನ್ನು 5 ವರ್ಷ ಎಂದು ಮಾಡಿದರೆ ಚೆನ್ನಾಗಿತ್ತು. ಇದನ್ನು 5 ವರ್ಷಕ್ಕೆ ಇಳಿಸಬೇಕು. ಲ್ಯಾಂಡುರೆವಿನ್ಯೂ ಕೋಡಿನಲ್ಲಿ ಸಾಮಾನ್ಯವಾಗಿ 5 ವರ್ಷ ಎಂದಿರುತ್ತದೆ.

ಅದೇ ಕ್ಲಾಸಿನಲ್ಲಿ, ಅನುಮತಿ ಇಲ್ಲದೆ ನೀರು ಉಪಯೋಗಿಸಿಕೊಂಡರೆ ಪೆನಾಲ್ಟಿ ಹಾಕಿದ್ದೀರಿ. ಅದನ್ನು 10ರಿಂದ 30ರಷ್ಟು ಕೊಡಬೇಕೆಂದು ಹೇಳಿದ್ದೀರಿ. ಇದು ತುಂಬ ಜಾಸ್ತಿ. For such unauthorised use of water, he will be liable to pay water rate ಅಂತ ಪೇಳಿದ್ದಾರೆ. ಇದರ ಪ್ರಕಾರ ಶಿಕ್ಷೆಗೆ ಅರ್ಹನಾಗುತ್ತಾನೆ. ತಿಳಿದೋ ತಿಳಿಯದೆಯೋ ರೈತ ನೀರು ಬಿಟ್ಟುಕೊಂಡು ಅಹಾರ ಬೆಳೆದಿರುತ್ತಾನೆ. ಅವರಿಂದ ದೇಶಕ್ಕೆ ಅನುಕೂಲವಾಗುತ್ತದೆ. ದೇಶಕ್ಕೆ ಅನುಕೂಲಮಾಡುವ ರೈತನನ್ನು ಭಗ್ನನನ್ನಾಗಿ ಮಾಡತ್ತೀರಿ: ಹೀಗೆ ಮಾಡಿದರೆ ಅವನ ಮನಸ್ಸಿನಲ್ಲಿ ಹೆಚ್ಚಿಗೆ ಬೆಳೆಯಲು ಉತ್ಸಾಹ ಬರುವುದಿಲ್ಲ. ಅವನ ಉತ್ಸಾಹ ಕಡಿಮೆಯಾದರೆ ಸರ್ಕಾರಕ್ಕೆ ಹೆಚ್ಚು ಆಹಾರ ಉತ್ಪಾದನೆ ಮಾಡುವುದರಲ್ಲಿ ತೊಂದರೆಯಾಗುತ್ತದೆ; ರೈತನನ್ನು ಯಾವಾಗಲೂ ತೊಂದರೆಗೀಡುಮಾಡಬಾರದು. 10--30 ಎಂದಿರುವುದನ್ನು, 5 ಮತ್ತು 10 ಎಂದು ಇಟ್ಟುಕೊಂಡರೆ ಚೆನ್ನಾಗಿರುತ್ತದೆ.

ಅದೇರೀತಿಯಲ್ಲಿ ಪೆನಾಲ್ಟಿಯನ್ನೂ ಬಹಳ ಜಾಸ್ತಿ ಹಾಕಿದ್ದಾರೆ, ಸಾಮಾನ್ಯವಾಗಿ ಹಿಂದಿನ ಆಕ್ಟುಗಳಲ್ಲಿ ಐವತ್ತು ರೂಪಾಯಿ ಎಂದು ಸಾಂಕೇತಿಕವಾಗಿ ಇರುತ್ತಿತ್ತು. ಈಗ ವಿಪರೀತ ಪೆನಾಲ್ಟಿ ಹಾಕಿದ್ದಾರೆ. ಈ ಕಾನೂನಿಗೆ ವಿರೋಧವಾಗಿ ಮಾಡಿದ ಅಪರಾಧಕ್ಕೆ ಒಂದು ಸಾವಿರ ರೂಪಾಯಿ ಫೈನ್ ಹಾಕಬಹುದು ಎಂದು ಹೇಳಿದ್ದಾರೆ. ಏನೋ ಒಂದು ನಣ್ಣ ತಪ್ಪಿಗೆ, ಒಂದು ವರ್ಷ ಕಠಿಣ ಸಜೆ, ಒಂದು ಸಾವಿರ ರೂಪಾಯಿ ಜುಲ್ಮಾನೆ ಹಾಕುವುದಾದರೆ, ಪೆನಾಲ್ಟಿ ಬಹಳ ಉಗ್ರವಾಯಿತು. ರೈತನು ಆಹಾರವನ್ನು ಜಾಸ್ತಿ ಬೆಳೆಯಬೇಕೆಂಬ ಉತ್ಸಾಹದಿಂದ ನೀರು ಉಪಯೋಗಿಸಿಕೊಂಡಿದ್ದರೆ ಅದು ಮಹಾಪರಾಧವೇ? ಹಳ್ಳಿಯ ಕಡೆಗಳಲ್ಲಿ ಉದ್ದೇಶಪೂರ್ವಕವಾಗಿ ಒಬ್ಬ ರೈತ ಇನ್ನೊಬ್ಬ ರೈತನ ಹೊಲಕ್ಕೆ ಕರುಕುಳ ಕೊಡುವುದಕ್ಕೆ ಬಿಟ್ಟುಬಿಡುತ್ತಾನೆ. ಆಗ ಅಧಿಕಾರಿಗಳು ವೈಮನಸ್ಸಿನಿಂದ ಉದ್ಭವವಾದ ಸನ್ನಿವೇಶವನ್ನು ಉಪಯೋಗಿಸಿಕೊಂಡು, ರೈತನ ಮೇಲೆ ಇಲ್ಲದ ಅಪಾದನೆ ಹೊರಿಸಿ ಅವನನ್ನು ಶಿಕ್ಷೆಗೆ ಗುರಿ ಮಾಡಬಹುದು. ಇದರಿಂದ ರೈತರಿಗೆ ತುಂಬಾ ತೊಂದರೆಯಾಗು

(ಶ್ರೀ ಎಚ್. ಆರ್. ಕೇಶವಮೂರ್ತಿ)

ತ್ತದೆ. ಇಷ್ಟೊಂದು ಜುರ್ಮಾನೆಯನ್ನು ಕಳ್ಳತನ ಮಾಡುವವರಿಗೆ, ಕ್ರಿಮಿನಲ್ಲುಗಳಿಗೆ ಕೂಡ ಹಾಕುತ್ತಾರೊ ಇಲ್ಲವೊ ಕಾಣೆ. ಈ ಕಾನೂನಿನಲ್ಲಿ ಹಾಕುವ ಜುರ್ಮಾನೆ, ಕೊಡುವ ಶಿಕ್ಷೆ ಸಾಂಕೇತಿಕವಾಗಿರಬೇಕು. ರೈತ ಏನಾದರೂ ತಪ್ಪು ಮಾಡಿದ್ದರೆ, ಅದನ್ನು ಅರಿತುಕೊಂಡು ಪುನಃ ಅದನ್ನು ಮಾಡದೆ ಇರುವುದಕ್ಕೆ ಜುರ್ಮಾನೆ ಇರಬೇಕು; ಅದಕ್ಕೆ ಇಷ್ಟು ಹೆಚ್ಚಿನ ಜುರ್ಮಾನೆ ಬೇಕಾಗಿಲ್ಲ. ಇಷ್ಟು ಕಠಿಣ ಶಿಕ್ಷೆ ಇಟ್ಟರೆ, ದೇಶದಲ್ಲಿ ಹೆಚ್ಚು ಆಹಾರ ಬೇಳೆಯಬೇಕೆಂಬ ನೀತಿಗೆ ಹಾನಿ ತಂದಂತಾಗುವುದಿಲ್ಲವೆ ಅನ್ನುವುದನ್ನು ಸರಕಾರ ಯೋಚಿಸಬೇಕು.

The Finance Minister can do it. He can reduce the fine. Even now it is not too late. He can bring in an amendment.

ರೈತರಿಗೆ ಹಾಕತಕ್ಕ ಜುರ್ಮಾನೆಗಳು ಸಾಂಕೇತಿಕವಾಗಿರಬೇಕು. ಅವರು ದರೋಡೆ ಮಾಡಿರುವ ಕ್ರಿಮಿನಲ್ಲುಗಳಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ ಈ ಶಿಕ್ಷೆಯನ್ನು ಕಡಿಮೆ ಮಾಡಬೇಕು.

ಒಟ್ಟಿನಲ್ಲಿ ಈ ಕಾನೂನನ್ನು ನೋಡಿದರೆ ನನಗೆ ಏನನ್ನಿಸುತ್ತಿದೆಂದರೆ, ನೀವು ರೈತನಿಗೆ ಸಹಾಯಕವಾಗತಕ್ಕಂಥ ಒಂದು ಕಾನೂನನ್ನು ಮಾಡುವುದಕ್ಕೆ ಬದಲಾಗಿ, ಈ ಕಾನೂನಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಇರ್ರಿಗೇಶನ್ ಇಲಾಖೆ ಅಧಿಕಾರಿಗಳಿಗೆ ಮತ್ತಿತರ ಅಧಿಕಾರಿಗಳಿಗೆ ಹೆಚ್ಚು ಅಧಿಕಾರವನ್ನು ಕೊಟ್ಟು ರೈತರಿಗೆ ಕಿರುಕುಳ ಜಾಸ್ತಿಯಾಗುವಂತೆ ಮಾಡಿದ್ದೀರಿ.

Mr. SPEAKER.—Generally, he should have stated this before it was referred to Select Committee.

Sri H. R. KESHAVA MURTHY.—Full scope was not given for discussions. Everything was done in a hurry. It was referred to the Select Committee. I had no chance to appeal.

ರೈತರಿಗೆ ಸಹಾಯವಾಗುವಂಥ ಅನುಕೂಲವಾಗುವಂಥ ಕಾನೂನು ಮಾಡಬೇಕು. ಈ ಕಾನೂನು ಬಹಳ ಕನ್‌ಫ್ಯೂಸಿಂಗ್ ಲ್ಯಾಂಗ್ವೇಜಿನಲ್ಲಿದೆ. ಈ ಒಂದು ಫೀಲ್ಡ್ ಚಾನಲ್ ವಿಷಯದಲ್ಲಿ ಬಹಳ ಕಾಂಪ್ಲಿಕೇಶನ್ನು ತಂದುಹಾಕಿದ್ದಾರೆ.

Mr. SPEAKER.—The Hon'ble Member cannot oppose the introduction now.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಇದನ್ನು ಓದಿದರೆ ಇದರಲ್ಲಿ ಅನೇಕ ತೊಂದರೆಗಳಿವೆ.

The main intention of the Government was to arm the Officers with undue powers to harass the ryots. That should not be the motto of this Bill.

Mr. SPEAKER.—He cannot oppose the introduction now, on that plea.

Sri H. R. KESHAVA MURTHY.—Any Bill may be drafted and sent to the Select Committee. This is not correct. It should be helpful to ryots.

† ಶ್ರೀ ಎಂ. ಸಿ. ಬನಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಈ ಸಭೆಗೆ ಕೊಟ್ಟಿರತಕ್ಕಂಥ ವರದಿಯ ಮೇಲೆ, ಎರಡು ಅಂಶಗಳನ್ನು ಕುರಿತು ನನ್ನ ಅಭಿಪ್ರಾಯವನ್ನು ಕೊಡಲು ಪ್ರಯತ್ನಪಡುತ್ತೇನೆ.

ಈಗ 4ನೆಯ ಸೆಕ್ಷನ್ನನ್ನು ತೆಗೆದುಕೊಳ್ಳುವುದಾದರೆ, ಅದನ್ನು ಜಾಯಿಂಟು ಸೆಲೆಕ್ಟ್ ಕಮಿಟಿಯವರು ತಿದ್ದುಪಡಿಮಾಡಿದ್ದಾರೆ. ಇದರ ಪ್ರಕಾರ ಏನಾಗುತ್ತದೆಂದರೆ ಯಾರೇ ಆಗಲಿ ನೀರಾವರಿ ಕಾಂಗಾರಿ ಮಾಡಿಸಬೇಕೆಂದರೆ, ಸರಕಾರದ ಅನುಮತಿ ಪಡೆಯಬೇಕು, ಅದು ಬಾವಿಗಳಿಗೆ ಅನ್ವಯಿಸುವುದಿಲ್ಲ. ಬಾವಿಗಳಿಗೆ ಯಾವ ಯಾವ ಏರಿಯಾದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕಂಟ್ರೋಲು ಅವಶ್ಯಕ ಅನ್ನುವುದನ್ನು ಸರ್ಕಾರದವರು ಹೇಳುತ್ತಾರೆ. ಅಂಥ ಏರಿಯಾಗಳಲ್ಲಿ ಬಾವಿ ತೆಗೆಯಬೇಕಾದರೆ ಸರಕಾರದ ಅನುಮತಿ ಪಡೆಯಬೇಕಾದುದು ಅವಶ್ಯಕ ಅಂತ 4ನೆಯ ಸೆಕ್ಷನ್ನಿನ 2ನೆಯ ಕ್ಲಾಸಿನಲ್ಲಿ ಹೇಳುತ್ತಾರೆ. ಇದೇ ವಿಷಯದಲ್ಲಿ, 50ನೆಯ ಕ್ಲಾಸಿನಲ್ಲಿ, Execution of wells near irrigation works ಎನ್ನುವುದರಲ್ಲಿ ಏನು ಮಾಡಿದ್ದಾರೆಂದರೆ, ಯಾವುದಾದರೂ ನೀರಿನ ಆಶ್ರಯವಿರತಕ್ಕಂಥ ಪ್ರದೇಶದಲ್ಲಿ ಬಾವಿ ತೆಗೆಯಬೇಕಾದರೆ, ಸರ್ಕಾರದವರು ನಿರ್ದಿಷ್ಟವಾಗಿ ಆ ಬಾವಿ, ನೀರಿನ ಆಸರೆಯಿಂದ ಎಷ್ಟು

ದೂರವಿರಬೇಕು ಎಂದು ಆಗಾಗ್ಗೆ ನಿರ್ಧರಿಸತಕ್ಕಂಥ ಅಧಿಕಾರವನ್ನು ಇಟ್ಟುಕೊಳ್ಳತ್ತಂಥಾದ್ದು ಎಂದು ಹೇಳುತ್ತಾ ಇದ್ದಾರೆ. ನನಗನಿಸುವುದು ಕ್ಲಾಸು 4ರ ಸಬ್-ಕ್ಲಾಸು (2) ರಲ್ಲಿ ಹೇಳಿರುವಂತೆ ಬಹುಶಃ ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ ಎಂದು ತೋಚುತ್ತದೆ. ಆದುದರಿಂದ ಇದನ್ನು ತೆಗೆಯುವುದು ಯುಕ್ತವೆಂದು ಕಾಣುತ್ತದೆ. ಇದರಲ್ಲಿರುವ 50ನೇ ಕ್ಲಾಸಿನಲ್ಲಿ ಕೂಡ ಹೇಳಿರುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಬಾವಿಯನ್ನು ತೆಗೆಯುವವರು ತೆಗೆಯುವ ಪ್ರದೇಶದಿಂದ ಇಷ್ಟು ದೂರದಲ್ಲಿರಬೇಕು ಮತ್ತು ಅದು ಯಾವ ಪ್ರಮಾಣದಲ್ಲಿರಬೇಕು ಎನ್ನುವುದನ್ನೆಲ್ಲ ಹೇಳಲಾಗಿದೆ. ಇದರಲ್ಲಿರುವುದೇ ಸರಿಯಾಗಿ ತೋರುವುದರಿಂದ ಈ ಬಿಲ್ಲಿನ ನಾಲ್ಕನೆ ಕ್ಲಾಜು ಸಬ್-ಕ್ಲಾಸು (2) ರಲ್ಲಿ ಹೇಳಿರುವುದನ್ನು ಮಾನ್ಯ ಮಂತ್ರಿಗಳು ಈಗಲಾದರೂ ಕೈಬಿಡುವುದರ ಬಗ್ಗೆ ಯೋಚನೆ ಮಾಡಬೇಕೆಂದು ಇಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಎರಡನೆಯದು ಬಹಳ ಮುಖ್ಯವಾದ ಪ್ರಶ್ನೆ, ಕಾಮಗಾರಿಯ ಬಗ್ಗೆ ಇವೊತ್ತು ಆಲೋಚನೆ ಮಾಡಬೇಕು. ಇಡೀ ಸಂಸ್ಥಾನದಲ್ಲಿ ಸುಮಾರು 39,000 ಕೆರೆಗಳಿವೆ ಮತ್ತು ಈ ಕೆರೆಗಳ ಅಚ್ಚುಕಟ್ಟು ಸುಮಾರು 13 ಲಕ್ಷ ಎಕರೆಗಳಷ್ಟು ಇವೆ ಎಂದು ನಮ್ಮ ಮುಂದೆ ಇರುವ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಮತ್ತು ಈ ಬಿಲ್ಲಿನಲ್ಲಿ ನಾಲ್ಕು ರೂಪಾಯಿಗಳಷ್ಟು ಇರಿಗೇಷನ್ನು ಸೆಸ್ಸು ವಸೂಲು ಮಾಡಿ ಅದನ್ನು ಇರಿಗೇಷನ್ ಫಂಡು ಎಂದು ಪ್ರತ್ಯೇಕವಾಗಿ ಮಾಡಿದ್ದಾರೆ. ಇದನ್ನು ಡಿವಿಜನ್ನುವ್ಯೆಸು ಹಾಗೂ ಡಿಸ್ಟ್ರಿಕ್ಟುವ್ಯೆಸು ಎಂದು ಹಂಚುವ ವ್ಯವಸ್ಥೆ ಮಾಡುವುದು ಅವಶ್ಯಕವಲ್ಲವೇ ಎಂದು ನನಗನಿಸುತ್ತದೆ. ನಾಲ್ಕು ರೂಪಾಯಿಗಳಷ್ಟು ಇರಿಗೇಷನ್ನು ಸೆಸ್ಸು ಎಂದು ವಸೂಲು ಮಾಡಿ ನಮ್ಮಲ್ಲಿರತಕ್ಕ ಎಲ್ಲ ನೀರಾವರಿ ಕಾಮಗಾರಿಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಲುಸಾಧ್ಯವಿಲ್ಲ ಎನ್ನುವುದನ್ನು ಸರಕಾರದವರೂ ಒಪ್ಪುತ್ತಾರೆ ಮತ್ತು ಇಲ್ಲಿರುವ ಎಲ್ಲ ಸದಸ್ಯರೂ ಕೂಡ ಒಪ್ಪಿಕೊಳ್ಳುತ್ತಾರೆ. ನೀರಾವರಿ ಕಾಮಗಾರಿಗಳಿಗಾಗಿ ಪ್ರತಿ ವರ್ಷವೂ ಇರಿಗೇಷನ್ನು ಫಂಡು ಎಂದು ಪ್ರತ್ಯೇಕವಾಗಿ ಮಾಡಿರುವುದರ ಜೊತೆಗೆ ಜನರಲ್ ರೆವೆನ್ಯೂ ಬಾಬಿನಿಂದ ಸ್ವಲ್ಪ ಹಣವನ್ನು ಕೊಡುವುದು ಅವಶ್ಯಕ ಎಂದು ನನಗನಿಸುತ್ತದೆ. 45ನೇ ಕ್ಲಾಸಿನಲ್ಲಿ ಹೇಳುವಂತೆ ತಾಲ್ಲೂಕು ಬೋರ್ಡುಗಳಿಗಾಗಿ ಮತ್ತು ತುಂಗಭದ್ರಾ ಬೋರ್ಡಿಗಾಗಿ ಕಾಮಗಾರಿಗಳನ್ನು ಮಾಡುವುದಕ್ಕೆ ಸರಕಾರ ಸ್ವಲ್ಪ ಹಣವನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ಆದರೆ ಈಗ ಇರಿಗೇಷನ್ನು ಫಂಡಿಗಾಗಿ ಪ್ರತ್ಯೇಕವಾಗಿ ನಾಲ್ಕು ರೂಪಾಯಿಗಳೆಂದು ವಸೂಲು ಮಾಡುವುದನ್ನು ಯಾವ ರಿಸರ್ವ್‌ನಿಂದ ಇಟ್ಟುಕೊಂಡು ಕಾಮಗಾರಿಗಳನ್ನು ಪೂರ್ತಿಯಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಕಡೆಗೆ ಸರಕಾರದವರು ಆಲೋಚನೆ ಮಾಡಿಲ್ಲ ಎಂದು ನನಗೆ ತೋರುತ್ತದೆ. ತುಂಗಭದ್ರಾ ಬೋರ್ಡ್ ಹಾಗೂ ಸ್ಥಳೀಯ ಸಂಸ್ಥೆಗಳಿಗಾಗಿ ಕೊಡುವಂತೆ ಜನರಲ್ ರೆವೆನ್ಯೂ ಬಾಬಿನಿಂದ ಏನಾದರೂ ಕೊಡುತ್ತಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ಇದರಲ್ಲಿ ಏನೂ ಹೇಳದೆ ಮೌನವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟೀಕರಣ ಮಾಡಬೇಕೆಂದು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹತ್ತು ಎಕರೆಗಳಷ್ಟು ಅಚ್ಚುಕಟ್ಟು ಇರುವಂತಹ ಕೆರೆಗಳು 16,622 ಮತ್ತು 10 ರಿಂದ 50 ಎಕರೆಗಳಷ್ಟು ಅಚ್ಚುಕಟ್ಟು ಇರುವ ಕೆರೆಗಳು 17,549 ಇವೆ ಎಂದರೆ ಒಟ್ಟು 34,171 ಎಕರೆಗಳಷ್ಟು ಆಯಕಟ್ಟು ಇರುವಾಗ ಯಾವ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳು ಮಾಡಿಕೊಳ್ಳುತ್ತವೆ ಎನ್ನುವುದರ ಬಗ್ಗೆ ಇದರಲ್ಲಿ ಸರಕಾರ ಸ್ಪಷ್ಟವಾಗಿ ಸೂಚಿಸಲಿಲ್ಲ. ಇದನ್ನು ಮಾಡುವುದು ಅವಶ್ಯಕವಲ್ಲವೇ ಎಂದು ನಾನು ಸರಕಾರದಲ್ಲಿ ಹೇಳುತ್ತಿದ್ದೇನೆ. ತುಂಗಭದ್ರಾ ಬೋರ್ಡಿಗೆಂದು ಪ್ರತ್ಯೇಕವಾಗಿ ಕೊಡುವುದಕ್ಕಿಂತ ಎಲ್ಲ ಹಣವನ್ನೂ ಸರಕಾರವೇ ನೇರವಾಗಿ ಖರ್ಚು ಮಾಡುವುದು ಸೂಕ್ತವಾಗಿರುತ್ತದೆ ಎಂದು ನಲಹೆ ಮಾಡುತ್ತಿದ್ದೇನೆ. ನಾಲ್ಕನೆ ಕ್ಲಾಸು ಸಬ್-ಕ್ಲಾಸು (2) ರಲ್ಲಿ ಹೇಳಿರುವುದರ ಬಗ್ಗೆ ಸರಕಾರ ಕೂಲಂಕಷವಾಗಿ ಪರಿಶೀಲನೆ ಮಾಡಿ ಅದನ್ನು ಕೈ ಬಿಡುವುದರ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕೆಂದು ಕೋರುತ್ತೇನೆ. ಈ ವಿಧೇಯಕ ನಿಜವಾಗಿಯೂ ಬಹಳ ಉಪಯುಕ್ತವಾದುದಾಗಿದೆ ಮತ್ತು ದೇಶದ ಎಲ್ಲ ನೀರಾವರಿ ಕಾಮಗಾರಿಗಳನ್ನೂ ಉತ್ತಮ ಪಡಿಸಬೇಕಾದುದು ಬಹಳ ಮುಖ್ಯವಾದುದು ಹೊಸ ಕೆರೆಗಳನ್ನು ಕಟ್ಟುವುದು ಎಷ್ಟು ಮುಖ್ಯವೋ ಹಳೆಯ ಕೆರೆಗಳನ್ನು ರಿಪೇರಿ ಮಾಡುವುದೂ ಅಷ್ಟೇ ಮುಖ್ಯ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† Sri N. O. SOMAJI (Belgaum II).—(In Marathi).

2-30 P.M.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ). —ಅಧ್ಯಕ್ಷರೆ, ಸಂಯುಕ್ತ ವಿಶಿಷ್ಟ ಸಭಿತಿಯವರಿಂದ ಪರಿಶೀಲನೆಲಬ್ಬಟ್ಟ ಈ ಸಭೆಯ ಮುಂದೆ ಇಡಲ್ಪಟ್ಟಿರುವ ಈ ನೀರಾವರಿ ಮಸೂದೆಯನ್ನನು ಮೋದಿಸುತ್ತ ಸರಕಾರದವರು ಹೆಚ್ಚಿನ ನೀರಾವರಿ ಸೌಕರ್ಯವನ್ನೊದಗಿಸಬೇಕೆಂಬ ಬಗ್ಗೆ ಕೆಲವು

(ಶ್ರೀ ಸಿದ್ದಯ್ಯ ಕಾಶೀಮಠ)

ಸಲಹೆಗಳನ್ನು ಕೊಡಬಯಸುತ್ತೇನೆ. ಮುಖ್ಯವಾಗಿ ಈ ರಾಜ್ಯದಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆರೆಗಳಿವೆ, ಎಷ್ಟೆಷ್ಟು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿವೆ, ಇವುಗಳ ಸಂಬಂಧ ಹಾಗೆ ಎಷ್ಟು ಸಿಬ್ಬಂದಿ ಬೇಕು ಎಂಬ ಯಾವ ವಿವರಗಳನ್ನೂ ಮಂತ್ರಿಗಳು ನೀಡಲಿಲ್ಲ. ಇಡೀ ರಾಜ್ಯದಲ್ಲಿ ಈ ಕಾನೂನನ್ನು ಜಾರಿಗೆ ತರುವಾಗ ಇದಕ್ಕೆ ಎಷ್ಟು ಸಿಬ್ಬಂದಿ ಬೇಕೆಂಬ ವಿಚಾರವನ್ನು ತಿಳಿಸಲಿಲ್ಲ. ನಾನು ನೋಡಿದ್ದರಲ್ಲಿ ಕೇವಲ ಕೆನಾಲ್ ಆಫೀಸರ್ ಮತ್ತು ಇರಿಗೇಷನ್ ಆಫೀಸರ್ ಎಂದು ಇಬ್ಬರು ಆಫೀಸರುಗಳಿದ್ದಾರೆ. ಇರಿಗೇಷನ್ ಆಫೀಸರು ಮುಖ್ಯ. 3ನೆಯ ಕ್ಲಾಜಿನಲ್ಲಿ

"Appointment of officers—The State Government, or subject to such conditions as may be prescribed, any officer of Government empowered in this behalf may by notification—"

ಎಂದು ಹೇಳಿದ್ದಾರೆ. ಮುಂದೆ ಯಾರಿಗಾದರೂ ತಮ್ಮ ಅಧಿಕಾರವನ್ನು ಡೆಲಿಗೇಟ್ ಮಾಡಬಹುದೆಂದು ಹೇಳಿದ್ದಾರೆ. ಆಯಾ ತಾಲ್ಲೂಕಿನ ತಹಶೀಲ್ದಾರರಿಗೆ ಅಧಿಕಾರವನ್ನು ಕೊಡುತ್ತಾರೆಯೇ ಎನ್ನುವ ಬಗ್ಗೆ ಯಾವ ವಿಷಯವನ್ನೂ ಹೇಳಿಲ್ಲ. ನಾನಾದರೂ ಈ ಸಂಬಂಧವಾಗಿ ಒಂದು ಸಲಹೆಯನ್ನು ಹೇಳುತ್ತೇನೆ. ಹೊಸ ಲ್ಯಾಂಡ್ ರೆವಿನ್ಯೂ ಕೋಡ್ ಜಾರಿಗೆ ಬಂದಿರುವುದರಿಂದ ಇರಿಗೇಷನ್ ಆಫೀಸರ ಕೆಲಸವನ್ನು ತಹಶೀಲ್ದಾರರಿಗೆ ಕೊಡಬಹುದು. ಪ್ರತಿ ತಾಲ್ಲೂಕಿಗೂ ತಹಶೀಲ್ದಾರ್ ಮತ್ತು ಬಿ. ಡಿ. ಓ. ಇದ್ದಾರೆ. ಹೀಗಿರುವಾಗ ಇನ್ನೂ ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡುವುದಕ್ಕಿಂತ ತಹಶೀಲ್ದಾರರಿಗೆ ಈ ಅಧಿಕಾರವನ್ನು ಕೊಟ್ಟರೆ ಒಳ್ಳೆಯದು. ಅಲ್ಲದೆ ನೀರಾವರಿ ಇಷ್ಟಿಷ್ಟು ಕೊಡಬೇಕೆಂಬ ನಿರ್ಣಯ ಮಾಡುವ ಅಧಿಕಾರ ಕೊಟ್ಟ ನಂತರ ಡೆಪ್ಯುಟಿ ಕಮೀಷನರಿಗೆ ಅಪೀಲು ಇರುತ್ತದೆ. ಆದಕಾರಣ ತಹಶೀಲ್ದಾರರಿಗೇ ಈ ಅಧಿಕಾರವನ್ನು ಕೊಡುವುದು ನೂಕ್ತವೆಂದು ಹೇಳುತ್ತೇನೆ.

'ಏನಾದರೂ ವಿವಾದಗಳು ಬಂದಾಗ, ನೀರು ಕೊಡುವಾಗ ಏನಾದರೂ ತೊಂದರೆ ಬಂದಾಗ' ಎಂದಿದೆ. ಇದರಲ್ಲಿ ಸರಕಾರಿ ಅಧಿಕಾರಿಗಳಿಷ್ಟು ಮಂದಿ, ಖಾಸಗಿ ಸದಸ್ಯರೆಷ್ಟು ಮಂದಿ ಎನ್ನುವುದು ನಮೂದಾಗಿಲ್ಲ. ರೂಲ್ಸ್‌ನಲ್ಲಿ ಹಾಕುತ್ತೇವೆಂದು ಹೇಳಬಹುದು, ಆದರೂ ಕೂಡ ನೆನ್ನೆ ದಿವಸ ಅಂಗೀಕೃತವಾದ ಪುನ್ತಕ ಭಂಡಾರಗಳ ವಿಧೇಯಕದಲ್ಲಿ ಇಂಥಾದ್ದು ನಮೂದಾಗಿದೆ. ಖಾಸಗಿ ಜನರಿಷ್ಟು, ಅಧಿಕಾರಿಗಳಿಷ್ಟು ಎಂದು ಅದರಲ್ಲಿ ಕೊಡಲಾಗಿದೆ. ಹಾಗೆಯೇ ಇದರಲ್ಲಿಯೂ ಕೊಟ್ಟಿದ್ದರೆ ಸರಿಯಾಗಿತ್ತು. ಈಗ ನಮಗೆ ಅನುಮಾನ ಬಂದಿರುವುದರಿಂದ ಇದನ್ನು ಸರಿಪಡಿಸಬೇಕು.

19ನೆಯ ಕ್ಲಾಜಿನಲ್ಲಿ ಫೀರ್ಡ್ ಚಾನರ್ ತೆಗೆಯಲು ತಗುಲುವ ಖರ್ಚಿನ ಮೊಬಲಗನ್ನು ಅರ್ಜಿದಾರ ಡಿಪಾಜಿಟ್ ಮಾಡುವುದಕ್ಕೆ ಸಂಬಂಧಪಟ್ಟ ನಿಯಮವಿದೆ. ಯಾರಾದರೂ ಒಬ್ಬ ರೈತ ಇಂತಹ ಕಾಲುವೆಯನ್ನು ತೆಗೆಯುದಿದ್ದರೆ ಅಥವಾ ಅದಕ್ಕೆ ತಗುಲುವ ಮೊಬಲಗನ್ನು ಪಾವತಿ ಮಾಡದಿದ್ದರೆ ಅವನಿಗೆ ನೀರು ಕೊಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ಅವನು ರೊಕ್ಕ ಕೊಡದೇ ಹೋದರೂ ಅವನಿಗೆ ನೀರು ಕೊಡಲು ಅವಕಾಶ ಮಾಡಿಕೊಡಬೇಕು.

"On receipt of payment in full of all expenses incurred, the applicant shall have the right to use the field-channel for supply of water to his lands."

ಎಂದಿದೆ. ಎಷ್ಟು ಹಣ ಅದಕ್ಕೆ ಖರ್ಚಾಗುತ್ತದೆಯೋ ಅಷ್ಟನ್ನೂ ಪೂರ್ತಿ ಕೊಟ್ಟನಂತರ ಅವನು ನೀರನ್ನೊದಗಿಸಿಕೊಳ್ಳಲು ಅರ್ಹನಾಗುತ್ತಾನೆ ಎಂದು ಇದರಲ್ಲಿ ಹೇಳಿದೆ. ಒಂದು ವೇಳೆ ಅವನು ಪೂರ್ತಿ ಕೊಡದಿದ್ದರೆ ಅವನಿಂದ ಕಂತುಗಳಲ್ಲಿ ವಸೂಲು ಮಾಡುವುದಕ್ಕೆ ಸಾಧ್ಯವಿದೆ. ಅವನು ಕೊಡದಿದ್ದರೆ ಆ ಹಣವನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡಲು ಅವಕಾಶವಿದೆ.

ಇನ್ನು 44ನೆಯ ಕ್ಲಾಜಿನಲ್ಲಿ ಮೈನ್‌ಟೆನೆನ್ಸ್ ಸೆಸ್ ವಿಷಯ ಹೇಳಿದ್ದಾರೆ.

"The State Government shall levy a maintenance cess at rupees four per acre per annum on all lands in the area benefited by any irrigation work maintained by the State Government..."

ಎಂದಿದೆ. ಈಗಾಗಲೇ ನೀರಾವರಿ ಕೆಲಸಗಳನ್ನು ಮಾಡಬೇಕಾದರೆ ಬೆಟರ್‌ಮೆಂಟ್ ಲೆವಿ, ವಾಟರ್‌ರೇಟ್, ಮೇನ್‌ಟೆನೆನ್ಸ್ ಸೆಸ್ ಮತ್ತು ಲ್ಯಾಂಡ್ ರೆವಿನ್ಯೂ ಹಾಕುತ್ತಾರೆ. ನೀರಾವರಿ ಮಾಡಿ ಫಸಲನ್ನು ಪಡೆಯಬೇಕಾದರೆ ಇಷ್ಟೊಂದು ಕಷ್ಟವಿರುವಾಗ ಇಷ್ಟೊಂದು ಹೆಚ್ಚು ದರದಲ್ಲಿ, ಎಕರೆಗೆ ನಾಲ್ಕು ರೂಪಾಯಿ ಕೊಡಬೇಕೆಂದರೆ ರೈತನ ಪರಿಸ್ಥಿತಿ ಎಷ್ಟುಮಟ್ಟಿಗಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹಳೇಯ ಮೈಸೂರು ಪ್ರದೇಶದಲ್ಲಿ ಹಿಂದೆ ಎಕರೆಗೆ ಮೂರು ರೂಪಾಯಿನವರೆಗೆ ಕೊಡುತ್ತಿದ್ದರು. ಈ ಹೊಸ ರಾಜ್ಯದಲ್ಲಿ ಇದನ್ನು ಎರಡು ರೂಪಾಯಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತುಂಗಭದ್ರಾ ಬೋರ್ಡಿದೆ, ಭದ್ರಾ ಬೋರ್ಡಿದೆ, ಇದರ ಬದಲು ರಾಜ್ಯಾದ್ಯಂತ ಒಂದೇ ಬೋರ್ಡನ್ನು ನೇಮಕ ಮಾಡಿ ಬೃಹತ್ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ, ನೀರಿನ ಸರಬರಾಯಿ ಮತ್ತು ಇವಕ್ಕೆ ಸಂಬಂಧಪಟ್ಟ ತಕರಾರುಗಳನ್ನು, ವಿವಾದಗಳನ್ನು ನಿವಾರಣೆ ಮಾಡಬೇಕೆಂದು ಸೂಚಿಸುತ್ತೇನೆ. ಇದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಒಂದೇ ಬೋರ್ಡಿನ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಹೇಳಿ, ಇದರಲ್ಲಿ ನಿಗದಿ ಮಾಡಿರುವ ಮೇನ್‌ಟೆನೆನ್ಸ್ ಸೆಸ್ ಕಡಮೆ ಮಾಡಿ ರೈತರಿಗೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕಂಥ ಇರಿಗೇಷನ್ ಬಿಲ್ಲಿನ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್‌ನ್ನು ನಾನು ಸ್ವಾಗತಿಸುತ್ತೇನೆ. ರೈತ ಸರಿಯಾಗಿ ನೀರು ಉಪಯೋಗಿಸುವ ಹಾಗೆ ಮಾಡಲು ಈ ಕಾನೂನನ್ನು ಅಳವಡಿಸಿರುವುದರಿಂದ ಈ ರಿಪೋರ್ಟ್‌ನ್ನು ಸ್ವಾಗತಿಸುತ್ತೇನೆ.

ಪೇಜ 12ರಲ್ಲಿ ಕ್ಲಾಜು 3 ಅಪಾಯಿಂಟ್‌ಮೆಂಟ್ ಆಫ್ ಆಫೀಸರ್ಸ್ ಬಗ್ಗೆ ಈ ರೀತಿ ಇದೆ:—

3. Appointment of Officers.—The State Government or, subject to such conditions as may be prescribed, any officer of Government empowered in this behalf may by notification,—

(*a*) appoint such officers with such designations, and assign to them respectively such powers and duties over such areas or such irrigation works under this Act, as the State Government or such officer may deem fit;

(*b*) invest any officer of Government in any Department or any other person with such powers and impose upon him such duties over such areas or such irrigation works under this Act, as the State Government or such officer may deem fit.

ಈ ಕ್ಲಾಜ ಬಗ್ಗೆ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಇದು ಇರತಕ್ಕದ್ದು ಅನುಕೂಲ. ಆದರೆ ಬಾಕಿ ಅಧಿಕಾರಿಗಳಿಗೆ ಈ ಕೆಲಸ ಕೊಟ್ಟರೆ ಅದು ಸರಿಯಾಗಿರುವುದಿಲ್ಲ ಎಂದು ಹೇಳಲು ಬಯಸುತ್ತೇನೆ.

ಇನ್ನು ಕ್ಲಾಜು 44 ಲೆವಿ ಆಫ್ ಮೆಂಟೆನೆನ್ಸ್ ಸೆಸ್ (1) ರಲ್ಲಿ ಒಂದು ಎಕರೆಗೆ ನಾಲ್ಕು ರೂಪಾಯಿ ಮೆಂಟೆನೆನ್ಸ್ ಸೆಸ್ ಹಾಕಬಹುದು ಎಂದಿದೆ. ಈ ಸಂಬಂಧದಲ್ಲಿ ನೋಟಿಫಿಕೇಷನ್ ಈಗಾಗಲೇ ಹೊರಡಿಸಿದ್ದಾರೆ. ಈ ನೋಟಿಫಿಕೇಷನ್ ಪ್ರಕಾರ ಕಬ್ಬು ಬೆಳೆಯುವವರು 70, ಭತ್ತ ಬೆಳೆಯುವವರು 20 ರೂಪಾಯಿ ಕಂದಾಯ ಹಣ ಕೊಡಬೇಕಾಗಿದೆ. ಇದಲ್ಲದೆ 4 ರೂಪಾಯಿ ಸೆಸ್ ಹಾಕುತ್ತೀರಿ. ಈಗ ಹೊಸದಾಗಿ ರೀ-ಸೆಟರ್‌ಮೆಂಟ್ ಆಗುತ್ತಾ ಇದೆ. ರೀ-ಸೆಟರ್‌ಮೆಂಟಿನಲ್ಲಿ ಕಂದಾಯ ಎಷ್ಟು ಹೆಚ್ಚಾಗುತ್ತದೆ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ವಾಟರ್ ಸೆಸ್ ತೆಗೆದುಕೊಂಡು ಮೆಂಟೆನೆನ್ಸ್ ಸೆಸ್ ಎತಕ್ಕೆ ಹಾಕಬೇಕು? ರೈತರಮೇಲೆ ಕಂದಾಯದ ಹೊರೆ ಜಾಸ್ತಿಯಾಗಿ ಹೋಗುತ್ತಾ ಇದೆ. ಪ್ರತಿಯೊಂದಕ್ಕೂ ಕಂದಾಯ ಹಾಕುತ್ತಾ ಹೋದರೆ ರೈತನಿಗೆ ಅದನ್ನು ತಡಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ಸರಕಾರ ದೊಡ್ಡ ಮನಸ್ಸು ಮಾಡಿ ಈ ಮೇಂಟೆನೆನ್ಸ್ ಸೆಸ್ ಹಾಕಬಾರದು ಎಂದು ಹೇಳುತ್ತೇನೆ. ಇದನ್ನು ಸರಕಾರ ವಾಪಸ್ಸು ತೆಗೆದುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯ ಈ ಕಾನೂನಿನಲ್ಲಿ ಬಹಳ ಸಮಾಧಾನ ತರತಕ್ಕಂಥಾದ್ದು ಇದೆ. ಕೆರೆ ಕಟ್ಟೆ ಏನಾದರೂ ಒಡೆದರೆ ಹಳ್ಳಿಯಲ್ಲಿ ಇರತಕ್ಕ ಜನ ಕಡ್ಡಾಯವಾಗಿ ಅದರ ದುರಸ್ತಿ ಕೆಲಸದ ಬಗ್ಗೆ

(ಶ್ರೀ ಟಿ. ಎನ್. ಮೊದಪ್ಪ ಗೌಡ)

ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು ಬಹಳ ನಮಾಧಾನಕರವಾಗಿದೆ. ಇದನ್ನು ಕಾಗದದ ಮೇಲೆ ಬರೆದರೆ ಪ್ರಯೋಜನವಿಲ್ಲ. ಕಟ್ಟುನಿಟ್ಟಾಗಿ ಇದನ್ನು ಜಾರಿಗೆ ತರುವ ಏರ್ಪಾಡು ಮಾಡಬೇಕು ಎಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು 52ನೇ ಕ್ಲಾಜಿನಲ್ಲಿ ಫಿಶಿಂಗ್ ಅಂಡ್ ಪ್ಲಾಯಿಂಗ್ ಆಫ್ ಬೋಟ್ಸ್ ಬಗ್ಗೆ ವಿವರ ಕೊಟ್ಟಿದೆ. ಮೀನು ಹಿಡಿಯುವ ಬಗ್ಗೆ ಒಂದು ರೀತಿಯ ವ್ಯವಸ್ಥೆ ಇರಬೇಕಾದದ್ದು ಅಗತ್ಯ. ಅಲ್ಲಲ್ಲಿಯ ಪಂಚಾಯತಿಗಳಿಗೆ ಈ ಅಧಿಕಾರ ವಹಿಸಿಕೊಡುವ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡಲು ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕ ಇರಿಗೇಶನ್ ಬಿಲ್ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ. ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ನಾನು ವಿರೋಧ ಮಾಡುತ್ತೇನೆ. ಈ ಮಸೂದೆಯನ್ನು ಕೂಲಂಕಷವಾಗಿ ಪರ್ಯಾಲೋಚನೆ ಮಾಡದೆ ಆತುರ ಆತುರವಾಗಿ ಕೆಲವು ಕಲಮುಗಳಿಗೆ ಅಮೆಂಡ್‌ಮೆಂಟ್ ಮಾಡಿ ಇದನ್ನು ತೆಗೆದು ಕೊಂಡು ಬಂದಿದ್ದಾರೆ. ನೀರನ್ನು ಯಾವ ರೀತಿ ಉಪಯೋಗ ಮಾಡಬೇಕು ಯಾವ ಬೆಳೆ ಬೆಳೆಯು ತಕ್ಕದ್ದು ಎನ್ನುವುದು ಇದರಲ್ಲಿದೆ. ಒಂದು ಕ್ಲಾಜನ್ನು ತಮ್ಮ ಗಮನಕ್ಕೆ ತರುತ್ತೇನೆ. ಕ್ಲಾಜು 63 ಈ ರೀತಿ ಇದೆ:

63: Recovery of cost of repairing damage when the offender is unascertainable.—When the person causing any damage, alteration, enlargement or obstruction to any irrigation work without proper authority cannot, after such enquiry as the Deputy Commissioner may deem sufficient, be ascertained or identified, the Deputy Commissioner may, on a requisition from the Irrigation Officer, after giving not less than one month's notice to the holders and occupiers of all lands benefited thereby, and after hearing their representations, if any, recover from them, as an arrear of land revenue, in such proportion as he thinks fit, the cost of repairing such damage, or of removing such alteration, or obstruction.

ಇದರಿಂದ ಏನು ಅನಾಹುತವಾಗುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಯಾರು ಡ್ಯಾಮೇಜ್ ಮಾಡಿದರು ಎಂಬುದು ತಿಳಿಯದೇ ಇದ್ದರೆ ಸಂಬಂಧಪಟ್ಟ ಎಲ್ಲ ರೈತರಿಂದ ಹಣ ವಸೂಲ್ಮಾಡಬೇಕು ಅಂದರೆ ರೈತರಿಗೆ ಅನಾನುಕೂಲವಾಗುತ್ತದೆ. ಆದುದರಿಂದ ಸರಕಾರ ಒಂದು ಅಮೆಂಡ್‌ಮೆಂಟ್ ತಂದು ರೈತರಿಗೆ ಪರಿಹಾರ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು 64ನೇ ಕ್ಲಾಜಿನಲ್ಲಿ ನೀರನ್ನು ಅನ್‌ಆಥರೈಜ್ಡ್ ಆಗಿ ಯಾರು ಉಪಯೋಗಿಸುತ್ತಾರೆ ಎಂಬುದು ಗೊತ್ತಾಗದೇ ಹೋದರೆ ನೀರಿನ ಲಾಭ ಪಡೆಯುವ ಎಲ್ಲ ರೈತರಿಂದ ನಷ್ಟ ವಸೂಲ್ಮಾಡಬೇಕು ಎಂದು ಇರುವುದು ನಿಜವಾಗಿಯೂ ಇದು ಸರಿಯಲ್ಲ ಎಂದು ತಿಳಿಸುತ್ತೇನೆ. ಇದಲ್ಲದೆ ಫೀಲ್ಡ್ ಚಾನಲ್ಸ್ ಬಗ್ಗೆ ಸಹ ಹೇಳಲಾಗಿದೆ. ಬಹುಶಃ ಇದರಿಂದ ಸಿವಿಲ್ ಲಿಟಿಗೇಶನ್ ಜಾಸ್ತಿಯಾಗಬಹುದು ಎಂದು ಕಾಣುತ್ತದೆ. ಹೊಸದಾಗಿ ತೆಗೆದುಕೊಳ್ಳುವ ಸನ್ನಿವೇಶದಲ್ಲಿ ರೈತ ಎಷ್ಟು ಹಣ ಕೊಡಬೇಕು ಎನ್ನತಕ್ಕದ್ದು ಕೆಲವು ನಮೂದು ಮಾಡಿದ್ದಾರೆ. ಇದರಿಂದ ಲಿಟಿಗೇಶನ್ ಜಾಸ್ತಿಯಾಗುತ್ತದೆ. ಆದುದರಿಂದ ಅವಶ್ಯಕತೆ ಇದ್ದಲ್ಲಿ ಸರಕಾರ ಫೀಲ್ಡ್ ಚಾನೆರ್ಲ್ಸ್ ತಾನೇ ಮಾಡಿಸಿ ಅದಕ್ಕೆ ಎಷ್ಟು ಖರ್ಚಾಯಿತು ನೋಡಿಕೊಂಡು ಸರಕಾರ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಈಗ ಕಾನೂನಿನಲ್ಲಿ ಇರುವ ಹಾಗೆ ಮಾಡುವುದು ಅವಶ್ಯಕತೆಯಿಲ್ಲ ಎಂದು ಕಂಡುಬರುತ್ತದೆ.

ಇನ್ನು ಕ್ಲಾಜು 50ರಲ್ಲಿ ಬಾವಿ ತೆಗೆಯುವ ಬಗ್ಗೆ ಹೇಳಲಾಗಿದೆ. ಇರಿಗೇಶನ್ ವರ್ಕ್ಸ್ ಹತ್ತಿರ ಬಾವಿ ತೆಗೆಯುವುದಕ್ಕೆ ಪರ್ಮಿಶನ್ ತೆಗೆದುಕೊಳ್ಳಬೇಕು ಎಂದಿದೆ. ಇದನ್ನು ಜಾರಿ ಮಾಡಿದರೆ ತೊಂದರೆಯುಂಟಾಗುತ್ತದೆ. ನಮ್ಮ ಜಮೀನಿನಲ್ಲಿ ನಾವು ಬಾವಿ ತೆಗೆಯುವುದನ್ನು ಹೇಗೆ ನಿರ್ಬಂಧ ಮಾಡುತ್ತೀರಿ? ಇದು ಅರ್ಥವಾಗುವುದಿಲ್ಲ. ರೈತ ತನ್ನ ಸ್ವಂತ ಜಮೀನಿನಲ್ಲಿ ಬಾವಿ ತೆಗೆಯಿಸುವುದನ್ನು ಅಡ್ಡಿಪಡಿಸುವುದು ಸರಿಯಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಏರಿಯ ಹಿಂಭಾಗದಲ್ಲಿ ಒಬ್ಬ ರೈತನ ಅಚ್ಚುಕಟ್ಟಿದ್ದರೆ; ಅಲ್ಲಿ ಅವನು ಬಾವಿ ತೆಗೆದರೆ ನರ್ಕಾರಕ್ಕೆ ಅವನೇನು ತೊಂದರೆ ಮಾಡಿದ ಹಾಗಾಯಿತು?

ಶ್ರೀ ಎಚ್. ಡಿ. ದೇವೇಗೌಡ.—ಹೀಗೆ ಸರ್ಕಾರದವರು ಮಾಡುವ ಸರ್ಕಾರಿ ನಾರೆಯ ಪಕ್ಕದಲ್ಲಿ ರೈತನು ಬಾವಿ ತೆಗೆದರೆ ಅದರಿಂದ ತೊಂದರೆಯಾಗುತ್ತದೆಂದರೆ ಅದರಲ್ಲಿ ಅರ್ಥವಿಲ್ಲ, ಅಲ್ಲಿ ಹಾಗೆ ರೈತನು ತನ್ನ ಅಚ್ಚುಕಟ್ಟಿನಲ್ಲಿ ಬಾವಿ ತೆಗೆಯುವುದಕ್ಕೂ ಸರ್ಕಾರದ ಅಪ್ಪಣೆಯನ್ನು ಪಡೆಯಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ; ಇದರಲ್ಲಿ ತಿರುಳೂ ಇಲ್ಲ. ಇದನ್ನು ವರದಿಯಲ್ಲಿ ಹೇಳಿದಿದ್ದರೇ ಚೆನ್ನಾಗಿತ್ತು. ಈ ದಿವನ ಒಬ್ಬ ಮನುಷ್ಯನಿಗೆ 50 ಎಕರೆ ಜಮೀನಿದ್ದರೆ ಅತನು ಮಳೆಯಿಂದ ಬರತಕ್ಕ ನೀರಿಗೆ ಅತನ ಜಮೀನಿನ ಮಧ್ಯದಲ್ಲಿ ಒಂದು ಕಟ್ಟೆಯನ್ನು ಹಾಕಿಕೊಳ್ಳುತ್ತೇನೆಂದರೆ ಅದಕ್ಕೆ ಸರ್ಕಾರ ಪರ್ಮಿಷನ್ ಕೊಡಬೇಕು ಅಂತ ಅನ್ನುವುದಾದರೆ, ಹೀಗೆ ರೈತ ಪ್ರತಿಯೊಂದಕ್ಕೂ ಸರ್ಕಾರಕ್ಕೆ ಬಂದು ಅಪ್ಪಣೆ ಪಡೆಯಬೇಕೆಂದರೆ ಇದು ಸಾಧ್ಯವಿಲ್ಲದ ಮಾತು. ಇದರಿಂದ ರೈತನಿಗೆ ತುಂಬಾ ಕಷ್ಟ. ಸರ್ಕಾರದವರಲ್ಲಿ ಇಂಥ ಕೆಲಸಗಳನ್ನು ಮಾಡಿಸಲು ಹಣವಿಲ್ಲದಿರುವಾಗ ಸರ್ಕಾರದವರೇಕೆ ಅತನ ಹಕ್ಕನ್ನು ಮೊಟಕು ಮಾಡಬೇಕು ಎಂದು ಕೇಳುತ್ತೇನೆ ? ಸರ್ಕಾರದವರು ಈ ರೀತಿ ರೈತನಿಗೆ ತೊಂದರೆ ಕೊಡುವುದಾದ ಪಕ್ಷದಲ್ಲಿ ಮುಂದೆ ಆಹಾರ ಪರಿಸ್ಥಿತಿ ಮತ್ತಷ್ಟು ಹದಗೆಡಬಹುದೆಂದು ನನಗನಿಸುತ್ತಿದೆ. ಇಷ್ಟನ್ನು ಹೇಳಿ ನನಗೆ ಹೆಚ್ಚುಮಾತನಾಡುವುದಕ್ಕೆ ಅವಕಾಶವಿಲ್ಲದ್ದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಸರ್ಕಾರದವರು ಈ ವಿಚಾರಗಳಲ್ಲೆಲ್ಲಾ ವಿವೇಚನೆಯಿಲ್ಲದೆ ಕೆಲಸಮಾಡುತ್ತಿದ್ದಾರೆ. ಅವರಿಗೆ ಈ ಪ್ರಶ್ನೆಯೇ ಬಗೆಹರಿದಿಲ್ಲ. ಇವರ ಇಂಥ ನಡವಳಿಕೆಯಿಂದ ಮೊದಲು ರೈತ ಹಾಳಾಗುತ್ತಾನೆ, ಅನಂತರ ದೇಶ ಹಾಳಾಗುತ್ತದೆ, ಕಡೆಗೆ ಸರ್ಕಾರವೂ ಹಾಳಾಗುತ್ತದೆ, ಇಂಥ ಆಡಳಿತದಿಂದ ದೇಶದಲ್ಲಿರತಕ್ಕವರಿಗೆಲ್ಲಾ ಕೇಡುತಪ್ಪಿದಲ್ಲ. ಈ ವರದಿಯಲ್ಲಿ ಅಚ್ಚುಕಟ್ಟುದಾರರಿಂದ ರಿಪೇರಿಂಗ್ ಖರ್ಚುವೆಚ್ಚಗಳನ್ನು ವಸೂಲ್ಮಾಡಬೇಕೆಂದು ಹೇಳಿದ್ದಾರೆ. ಆದರೆ ಈ ರಿಪೇರಿಯ ಕೆಲಸವನ್ನು ಕಾಲಕಾಲಕ್ಕೆ ಸರಿಯಾಗಿ ಮಾಡಿದ್ದರೆ ಒಂದು ವರ್ಷಕ್ಕೆ ಒಬ್ಬ ರೈತನಿಗೆ 10 ರೂಪಾಯಿಗಳ ಖರ್ಚೂ ಸಹ ಬರುತ್ತಿರಲಿಲ್ಲ. ಈಗ ಈ ಕೆಲಸವನ್ನು 10—12ವರ್ಷ ಹಾಗೇ ಕೈಬಿಟ್ಟು ಪ್ರಾರಂಭಮಾಡಿದರೆ ಅದರ 10ರಷ್ಟು ಅಂದರೆ ಒಬ್ಬನಿಗೆ 100 ರೂಪಾಯಿ ಖರ್ಚು ಬರುತ್ತದೆ. ಹೀಗೆ ಇವರು ವಸೂಲ್ಮಾಡಿದ ಹಣವನ್ನು ಏಕೆ ಹಾಗೆ ಇಡಲಾಗಿಟ್ಟಿರುತ್ತಾರೋ ನನಗೆ ತಿಳಿಯುತ್ತಿಲ್ಲ. ಇದಕ್ಕೆ ನನ್ನ ಸಲಹೆಯೇನೆಂದರೆ ಈ ಹಣವನ್ನೆಲ್ಲಾ ಒಂದು ಸೆಂಟ್ರಲ್ಪೂಲಮಾಡಿ, ರಾಜ್ಯದಲ್ಲೇ ಒಂದು ಪೂಲ್ಮಾಡಿ, ಅದರ ವಿನಿಯೋಗಕ್ಕೆ ಒಂದು ಮಾರ್ಗಮಾಡಬೇಕಾಗಿದೆ. ಹಾಗೆ ಮಾಡದಿರುವುದರಿಂದ ಈ ದಿವನ ಹಣವೆಲ್ಲಾ ದೇಶದಲ್ಲಿ ಎಲ್ಲೆಲ್ಲೂ ಮುಳ್ಳು ಬೀಳುತ್ತಿದೆ. ಇದರ ಮೌಲ್ಯ ಡೆಡ್ ಕ್ಯಾಪಿಟಲ್ ಆಗಿಬಿಟ್ಟಿದೆ. ದೇಶಕ್ಕೆ ಇದರಿಂದ ಬಹಳ ನಷ್ಟವಾಗುತ್ತಿದೆ. ಸರ್ಕಾರ ಇದನ್ನು ಸ್ವಲ್ಪವೂ ಪರಿಶೀಲನೆಮಾಡಿಲ್ಲ. ಸರ್ಕಾರದವರಿಗೆ ಯಾವ ಕೆಲಸಮಾಡುವುದು ಗೊತ್ತಿಲ್ಲದಿದ್ದರೂ ಚಿಂತೆಯಿಲ್ಲ, ಬರತಕ್ಕ ಹಣವನ್ನು ಸರಿಯಾಗಿ ವಿನಿಯೋಗ ಮಾಡತಕ್ಕ ಒಂದು ಬಾಬನ್ನಾದರೂ ಅವರು ಸರಿಯಾಗಿ ತಿಳಿದಿರಬೇಕು. ಇಲ್ಲಿ ಒಬ್ಬ ಇರಿಗೇಷನ್ ಆಫೀಸರನ್ನು ನೇಮಕ ಮಾಡಿದ್ದಾರೆ. ಆದರೆ ಈ ಕೆರೆಗಳ ರಿಪೇರಿಯನ್ನು ಇರಿಗೇಷನ್ ಅಧಿಕಾರಿಗಳು ನಡೆಸುತ್ತಾರೋ ಅಥವಾ ಪಿ. ಡಬ್ಲ್ಯು. ಡಿ.ಯವರು ನಡೆಸುತ್ತಾರೋ ಒಂದೂ ಗೊತ್ತಾಗುವುದಿಲ್ಲ. ಸರ್ಕಾರದವರಲ್ಲ ದುಡ್ಡಿಲ್ಲದೆ ಪಾಪರಾಗಿರತಕ್ಕ ಈ ಕಾಲದಲ್ಲಿ ಇದೆಲ್ಲಾ ಇವರಿಗೇಕೆ ಬೇಕಾಗಿತ್ತು ?

3-00 P.M.

ಆ ರೋಗವು ಇಲ್ಲಿಯೂ ಹತ್ತದಿರಲಿ ಎಂದು ನಾನು ಹೇಳುತ್ತೇನೆ. ಕ್ಲಾಜ 19ರಲ್ಲಿ ಫೀಲ್ಡ್ ಥಾನಲ್ಗಳ ವಿಚಾರ ಹೇಳಿದ್ದಾರೆ. ಈಗ ಎಷ್ಟೋ ಅಚ್ಚುಕಟ್ಟುಗಳಲ್ಲಿ ಒಕ್ಕಲುತನವೇ ಇಲ್ಲ. ಅಲ್ಲಿ ಒಕ್ಕಲುತನದವರು ಇಲ್ಲದ ಮೇಲೆ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ಆದರೆ ಮೈಸೂರಿನವರಲ್ಲಿ ಎಂಟರ್ಪ್ರೈಸಿಲ್ಲ ಎಂದು ಹೇಳುತ್ತಾರೆ. ಈ ರೀತಿಯಿಲ್ಲ ಹಣವನ್ನು ಲ್ಯಾಪ್ಸುಮಾಡುವುದರಲ್ಲ ಪ್ರಯೋಜನವಿಲ್ಲ, ಸರ್ಕಾರದವರ ಪ್ರಯತ್ನಗಳಿಂದ ದೇಶಕ್ಕೆ ಅನುಕೂಲವಾಗಬೇಕು ;ಅದರಿಂದ ಸರ್ಕಾರಕ್ಕೂ ಹಣ ಬರಬೇಕು. ಅದಕ್ಕೆ ಅವರು ಹಿಂದೆ ಮಾಡಿದ್ದ ಆ ಸೀಡ್ಫಾರಂಗಳಂತೆ ಇಲ್ಲಿಯೂ ಮಾಡಬೇಕೆಂದು ಹೇಳುತ್ತೇನೆ ಅಂಥ ಪ್ರಯತ್ನ ಮಾಡುವುದಕ್ಕೆ ಮನಸ್ಸಿಲ್ಲದಮೇಲೆ ಇಂಥ ಬಿಲ್ಲನ್ನು ತರತಕ್ಕದ್ದು ಭಾರಿ ಅಭಾನಕ್ಕೆ ಕಾರಣ. ಇನ್ನು ಕ್ಲಾಜ—32ರಲ್ಲಿ ಹೇಳಿರತಕ್ಕದ್ದು ಬಹಳ ಒಳ್ಳೆಯದೇ ಆದರೆ ಈ ಸಮಿತಿಯಲ್ಲಿ ಯಾರಿರುತ್ತಾರೆ ಏನು ಎಂಬುದನ್ನ ಹೇಳಿಲ್ಲ. ಇದರಲ್ಲ ಗ್ರಾಮಪಂಚಾಯತಿಗೆ ಒಂದು ಪ್ರಾತಿನಿಧ್ಯ ಕೊಡಬೇಕಾದ್ದುಅಗತ್ಯ, ಪೂರ್ವದಿಂದ ಬಂದಿರತಕ್ಕ ಬೆಳೆಯನ್ನು ಒಂದೇ ಸಾರ್ತಿಗೆ ಕೈಬಿಡಬೇಕೆಂದರೆ ಅದರಿಂದ ಬಹಳ ತೊಂದರೆ ಬರುತ್ತವೆ ; ದೇಶಕ್ಕೆ ಅನಾಹುತ. ದೇಶದಲ್ಲಿ ಆಹಾರೋತ್ಪನ್ನು ಇನ್ನೂ ಕುಂಠಿತವಾಗತ್ತದೆ. ಒಬ್ಬ ಸರಿಯಾದ ಅಗ್ರಿಕಲ್ಚರಲ್ ಅಧಿಕಾರಿಯನ್ನು

(ಶ್ರೀ ಎ. ಎಂ. ದೇಪ್)

ನೇಮಕ ಮಾಡಿ ರೈತರಿಗೆ ಚೆನ್ನಾಗಿ ಮನವರಿಕೆಯಾಗುವಂತೆ ಇದನ್ನು ತಿಳಿಸಬೇಕು ; ಹಾಗೆ ಮಾಡದೆ ಇದನ್ನು ಏಕದಂ ಬದರಾವಣೆ ಮಾಡಬೇಕೆಂದು ಹೇಳುವುದು ಸರಿಯಲ್ಲ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri ANNA RAO GANAMUKHI (Afzalpur).—Sir, the Select Committee has reduced the maintenance cess from rupees five to rupees four. I do not know the reasons why this has been reduced. What is the total collection made on the whole net irrigated area in the State and the amount collected as water rate and the percentage which can be collected as the maintenance cess ?

Mr. SPEAKER.—The House will now rise and re-assemble after half-an-hour. The Hon'ble Member may continue afterwards.

The House adjourned at Five Minutes past Three of the Clock and re-assembled at Thirty Minutes past Three of the Clock.

[MR. SPEAKER in the Chair].

Sri ANNA RAO GANAMUKHI.—Sir, I was mentioning that the Select Committee has not formulated any law to maintain this cess nor the Government has given any explanation stating the reasons for fixing this maintenance cess I do not know whether any other State has a separate cess imposed on irrigators. As far as I know, the Maharashtra Irrigation Commission has recommended to abolish the irrigation cess and if any rate is to be enhanced or any surcharge has to be imposed on the water rate, it may be done because the water rate should be one and it should not be split up into water rate and maintenance cess separately. The Bill has now come before us and I do not want to say anything on that point. At any rate, Sir, the Select Committee would have probed deep into the matter and would have convinced this House about the desirability of reducing or keeping the same rate as four rupees or five rupees and the reason for the same.

According to article 14 of the Constitution, if the burden has to be imposed on the irrigators, the burden should be equal upon all of them. As we see, there are 2 or 3 categories of irrigators. We have major irrigation projects, medium irrigation projects and minor irrigation. The State Government or the Select Committee have not taken the trouble to see whether uniform rate should be imposed on all of them in the manner it has been done in this Bill. They should have thought twice before doing that. Sir, those irrigators who come under the command of major irrigation sources, where the source is perennial and where water is supplied throughout the year, their rate

should have been different from those who do not take water throughout the year but only to seasonal crops. For such irrigators the rate of maintenance cess should have been different. Here, there is no equality before law as far as the burden is concerned. It is likely to be called in question in a court of law. I want to ask whether this aspect of the question has been examined in this connection. There are 2 or 3 categories of irrigators who have been brought under this scheme and all of them have been metted out with the same sort of treatment, that is, all of them have to pay rupees four. I want to ask whether it is fair treatment. Supposing there is a small canal, naturally the command area and maintenance expenditure will be less. Even in such a case, should we extract the same rate from those irrigators? Another thing is that if the Government wants to recover some of the capital charges which have been spent on these large reservoirs, then I think they should have come forward with facts and figures and convinced this House about the feasibility or fixing these rates. This apart, there should be some discrimination in the matter of levying these rates having regard to the size of the reservoir and various other factors. Under article 14 of the Constitution, I do not think it would be valid to levy this uniform rate on all the irrigators. The question of benefit has not at all been looked into.

There are some composite schemes or projects where electricity is also generated. Under such schemes, what is the burden that will be imposed on the irrigators? Has the Government split the expenditure separately? Is it that the irrigators should bear all the expenditure and the people who have benefited by electricity are not to share in it? Already, the regional electricity grid has come into existence. We are producing hydro-electric power by spending less while the other States are producing thermal power at a higher cost. If the rates are equalised, we will be put to a loss. Our rates of power will go up and at the same time the irrigator will have to bear the increased charge. What has the Government done in this respect? For instance, take the Tungabhadra Project. There, electricity is also produced and sold. When that power is given to Andhra or any other State under the grid system, the question arises as to what is the share that has to be apportioned to the electricity which is produced in some of these projects? That has not been done. Moreover, I may also mention in this connection that water is sold for drinking purpose, for industrial purpose and for many other purposes. Has the State Government examined as to what is the income which the State Government gets by selling water to all these categories of users? That also has not been considered.

Again the cost per unit of million cubic feet of water has also not been worked out because that will involve basinwise calculation. Some of the projects are protective in nature, some are semicommercial and some have been built to mitigate famine conditions as and when they occur. The irrigators coming under these projects should not be charged anything at all. It may be said that otherwise the tax-payers will have

(SRI ANNA RAO GANAMUKHI)

to subsidise the maintenance charge. This is a future insurance and as such they should not be charged anything at all.

Under section 32, the Irrigation Officer is to determine the kind of crop to be grown under the irrigation area after consultation with the Committee appointed under section 27. This localisation should not come at all. The irrigator or the farmer should be free to grow any crop he likes; there should be no interference with his choice. The Maharashtra Irrigation Commission has said that the farmer should be free to grow any crop he wants on his land. Here, and engineer is made the final authority who has to do this job with the approval of the Deputy Commissioner.

It is very strange and it is like taking a goldsmith's work from a blacksmith. A blacksmith cannot do the work of a goldsmith. Similarly, this person cannot design the crops as he does not know the chemicals of the soil. It is for the Agricultural Officer to come into the picture. But here the State Government appoints a Committee to advise him and the Committee may advise him, but he is not bound by the advice of the Committee. That is a strange thing. If he is bound by the Committee's advice, then that is a different thing. What is stated here is only " in consultation with the Committee he will decide the crop pattern ", but he is not bound by the advice of the Committee. I think by this we are doing the greatest dis-service to our irrigators.

Then, Sir, I would like to say in this connection that we should have separate rates for separate classes of lands so that the burden may not fall unequally on all.

MR. SPEAKER.— Supposing it is not equal but equitable ?

SRI ANNA RAO GANAMUKHI.—If it is equitable it is all right, but here it is equal and it is a flat rate. Flat rate means that a person owning a very bad type of land which is not fertile also has to pay the same rate as a person who owns very fertile and rich lands who grows commercial crops. Is it just, I want to ask ? I do not think it is just. Probably, the Joint Select Committee might have in its mind that even this rate of Rs. 4 will not cover the whole expenditure which is incurred by Government to pay interest on the loans taken for the capital work. But unfortunately this imposes an unequal burden on all categories of persons. What I say is that these things should be taken into consideration along with the other points I have mentioned, namely, that where there is electricity scheme, where there is a composite scheme, a part of the burden should be shifted to that scheme. When the zonal grid system comes into existence, then that burden also may be shifted to this scheme so that our agriculturists may be unburdened to a slight extent.

SRI SANJEEVANATH AIKALA (Suratkal).—Mr. Speaker, Sir, confining myself mainly to the new suggestions made be the Joint Select Committee, I would like to say that I welcome those suggestions inasmuch as we do not have proper utilization of all our irrigation potentialities at present. To my dirtrict of South Kanara this measure seems to be a

new one as from time immemorial we have been used to what is known as 'mamul huq' for the utilization of water, repairs and maintenance of irrigation works. So most of the provisions of the Bill are new to the farmers of our district. We were not used to paying any water rate or cess in most of the works until recently when these things were introduced in our district. I only wish to point out to a certain provision under which the Deputy Commissioner has got full rights to acquire lands for the purpose of forming field channels. Many irrigation works have been undertaken in our district. Many Vented dams have been constructed and many irrigation works have been done, but looking to the utilization of the water, one has to agree that most of these remain unused for want of field channels. We have completed the vented dams, but water could not be used because the Government cannot acquire land for the purpose of forming the field channels and consequently these dams have proved to be useless. In my constituency the work of a Vented dam costing Rs. 75,000 was completed three years back, but the water could not be used for want of field channels. Similarly, a bridge was constructed at Maravoor at a cost of several lakhs of rupees, but for want of approach road the bridge could not be used. What I mean to say is that in such cases the Deputy Commissioner should be invested with all powers to acquire lands immediately. I find that under clause 16, the Deputy Commissioner has been given certain powers for the purpose of forming field channels, but those powers are not enough ; because he will feel helpless in spite of these powers. There are several provisos which fetter his hands.

Mr. SPEAKER.—Does it mean that all provisos should be deleted ?

Sri SANJEEVANATH AIKALA.—There are some useful provisos also. I feel that the Deputy Commissioner should be invested with more powers to acquire lands for forming field channels.

Then there is no reference to lift irrigation co-operative society works. All these are model schemes and every district must have at least one model scheme, but no reference has been found to that in the Bill. Since several works are required to be done under lift irrigation schemes, they should have been inlcuded in this Bill. Sir, I wish that this Bill had not referred to the mamul of rights enjoyed by the farmers.

Mr. SPEAKER.—Mamul rights come under the Easements Act.

Sri SANJEEVANATH AIKALA.—If so, well and good. I have nothing more to say.

